**ಗ್ರಾಮಾಂತರ ಹಾಗೂ ಪಟ್ಟಣ ಪ್ರದೇಶಗಳ ಶಾಲಾ ಮಕ್ಕಳಿಗೆ ಕೊಡುತ್ತಿದ್ದ ಹಾಲಿಗೆ ಖರ್ಚಾದ ಹಣ**

68 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) 1993-94ರವರೆಗೆ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಕುಡಿಯಲು ಹಾಲು ಕೊಡುತ್ತಿದ್ದು ಈ ಬಗ್ಗೆ ಖರ್ಚಾದ ಹಣ ಎಷ್ಟು?*

*ಆ) ಗ್ರಾಮಾಂತರ ಶಾಲೆಗಳಿಗೆ ಹಾಗೂ ಪಟ್ಟಣ ಪ್ರದೇಶದ ಮಕ್ಕಳಿಗಾಗಿ ಖರ್ಚಾದ ಹಣ ಪ್ರತ್ಯೇಕ ಪ್ರತ್ಯೇಕವಾಗಿ ಎಷ್ಟು?*

*ಇ) ಈ ಯೋಜನೆಯಲ್ಲಿ ಸರ್ಕಾರದ ತೆಗೆದಿಟ್ಟ ಹಣ ಎಷ್ಟು?*

*ಈ) ಈ ಯೋಜನೆಯಲ್ಲಿ ಗ್ರಾಮಾಂತರ ಶಾಲೆಗಳಿಗೆ ಹಾಲಿನ ಪುಡಿಯನ್ನು ಪಟ್ಟಣದ ಮಕ್ಕಳಿಗೆ ಶುದ್ಧ ಹಾಲನ್ನು ನೀಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈ ಹಂಚಿಕೆಯಲ್ಲಿ ತಾರತಮ್ಯವೇಕೆ?*

ಶ್ರೀಮತಿ. ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ರೂ. 8,86,24,534.00 ಗಳು

ಆ) ಪಟ್ಟಣದ ಪ್ರದೇಶದ ಶಾಲಾ ಮಕ್ಕಳಿಗಾಗಿ ರೂ. 1,77,24,905.00

ಗ್ರಾಮಾಂತರ ಪ್ರದೇಶದ ಶಾಲಾ ಮಕ್ಕಳಿಗಾಗಿ ರೂ. 7,08,99,629.00

ಇ) ಕ್ಷೀರ ಯೋಜನೆಯನ್ನು 1993-94ನೇ ಸಾಲಿನ ಕೊನೇ ಹಂತದಲ್ಲಿ ಹಮ್ಮಿಕೊಂಡಿದ್ದರಿಂದ ಈ ಯೋಜನೆಗಾಗಿ ಪ್ರತ್ಯೇಕವಾಗಿ ಆಯವ್ಯಯದಲ್ಲಿ ಒದಗಿಸಿಕೊಂಡಿರಲಿಲ್ಲ. ಆದರೆ 1993-94ನೇ ಸಾಲಿನಲ್ಲಿ ಶಿಕ್ಷಣ ಇಲಾಖೆಯ ಅಕ್ಷಯ ಯೋಜನೆಯಡಿ ಆಹಾರ ಕಾರ್ಯಕ್ರಮಕ್ಕಾಗಿ ಒದಗಿಸಿಕೊಂಡಿದ್ದ ಆಯವ್ಯಯದಲ್ಲಿಯೇ ಈ ವೆಚ್ಚವನ್ನು ಭರಿಸಲಾಯಿತು.

ಈ) ಡೇರಿಗಳ ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘಗಳ ವ್ಯಾಪ್ತಿಯಲ್ಲಿ ಬರುವ ಶಾಲೆಗಳಿಗೆ ಕಾಯಿಸಿ ಸಿಹಿ ಮಾಡಿದ ಹಾಲನ್ನು ಒದಗಿಸಲಾಗುತ್ತಿದೆ. ಹಾಲು ಉತ್ಪಾದಕರ ಸಹಕಾರ ಸಂಘಗಳು ಅಸ್ತಿತ್ವದಲ್ಲಿ ಇರದ ಪ್ರದೇಶದ ಶಾಲೆಗಳಿಗೆ ಮಾತ್ರ ಹಾಲಿನ ಪುಡಿಯನ್ನು ಸರಬರಾಜು ಮಾಡಲಾಗುತ್ತಿದೆ. ಇದರಿಂದಾಗಿ ತಾರತಮ್ಯದ ಪ್ರಶ್ನೆ ಉದ್ಭವಿಸುವುದಿಲ್ಲ.

**ಹೊಳೆನರಸೀಪುರದಲ್ಲಿರುವ ಪ್ರೌಢಶಾಲೆಗಳು**

653 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಹೊಳೆನರಸೀಪುರದಲ್ಲಿರುವ ಸರ್ಕಾರಿ ಪ್ರೌಢಶಾಲೆಗಳ ಸಂಖ್ಯೆ ಎಷ್ಟು?*

*ಆ) 1993-94ನೇ ಎಷ್ಟು ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡಲಾಗಿದೆ.*

*ಇ) 1994-95ರಲ್ಲಿ ಎಷ್ಟು ಹೊಸ ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡಲಾಗಿದೆ?*

*ಈ) ಇವುಗಳ ಪೈಕಿ ಮಾರನಹಳ್ಳಿ ವಿಭಾಗದಲ್ಲಿ ಎಷ್ಟು ಸರ್ಕಾರಿ ಪ್ರೌಢಶಾಲೆಗಳನ್ನು 1994-95ರಲ್ಲಿ ಮಂಜೂರು ಮಾಡಲಾಗಿದೆ.*

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) ಎರಡು.

ಆ) 1993-94ನೇ ಸಾಲಿನಲ್ಲಿ ಯಾವ ಸರ್ಕಾರಿ ಪ್ರೌಢಶಾಲೆಗಳು ಮಂಜೂರಾಗಿರುವುದಿಲ್ಲ.

ಇ) ಒಟ್ಟು 218.

ಈ) ಇಲ್ಲ.

**ದ. ಕನ್ನಡ ಜಿಲ್ಲೆಯಲ್ಲಿ ಮಲೇರಿಯಾ ಖಾಯಿಲೆ ಬಗ್ಗೆ**

574 - ಶ್ರೀ ಸೋಮಪ್ಪ ಸುವರ್ಣ (ಮುಲ್ಕಿ ಮೂಡಬಿದರೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಲೇರಿಯಾ ಕಾಣಿಸಿಕೊಂಡಿರುವುದು ನಿಜವೇ?*

*ಆ) ಹಾಗಿದ್ದಲ್ಲಿ ಎಷ್ಟು ಜನರಿಗೆ ಈ ಕಾಯಿಲೆ ತಾಗಿದೆ?*

*ಇ) ಇದರ ಚಿಕಿತ್ಸೆಗಾಗಿ ಸರ್ಕಾರ ಏನು ಕ್ರಮ ಕೈಗೊಂಡಿದೆ?*

ಡಾ॥ ಎ.ಬಿ. ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಹೌದು.

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜುಲೈ 94 ರವರಿಗೆ ಒಟ್ಟು 2825 ಮಲೇರಿಯಾ ಪ್ರಕರಣಗಳು ವರದಿಯಾಗಿವೆ. (ಮಂಗಳೂರು ನಗರದಲ್ಲಿ 1429 ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ 1396 ಪ್ರಕರಣಗಳು ವರದಿಯಾಗಿರುತ್ತವೆ.

ಇ) ಈ ಕೆಳಕಂಡ ನಿಯಂತ್ರಣ ಹಾಗೂ ಚಿಕಿತ್ಸಾಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1. ಎಲ್ಲಾ ಜ್ವರಪೀಡಿತರಿಂದ ಸ್ಥಿತ ಹಾಗೂ ಸಕ್ರಿಯ ರಕ್ತಲೇಪನ ಸಂಗ್ರಹಿಸಿ, ಮಲೇರಿಯಾ ರೋಗ ಪ್ರಕರಣಗಳನ್ನು ಪತ್ತೆ ಹಚ್ಚಲಾಗುತ್ತಿದೆ. ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ರಕ್ತಲೇಪನ ಸಮೀಕ್ಷೆ ಕಾರ್ಯವನ್ನು ಚುರುಕುಗೊಳಿಸಲಾಗಿದೆ.
2. ಎಲ್ಲಾ ಖಚಿತ ಮಲೇರಿಯಾ ಪ್ರಕರಣಗಳಿಗೂ ಕ್ಲೋರೋಕ್ವಿನ್ ಮತ್ತು ಪ್ಲೈಮಾಕ್ವೀನ್ ಗುಳಿಗೆಗಳಿಂದ ತೀವ್ರ ಚಿಕಿತ್ಸೆ - ನೀಡಲಾಗುತ್ತಿದೆ. ಮಲೇರಿಯಾ ನಿರೋಧಕ ಗುಳಿಗೆಗಳು,ಕೀಟನಾಶಕ ಪುಡಿ, ಹೆಗದಾರ್ನ ಸೂಜಿಗಳು, ರಕ್ತ ಲೇಪನ ಸಂಗ್ರಹಣ ಗಾಜಿನ ಹಲಿಗೆಗಳು ಹಾಗೂ ಸೊಳ್ಳೆಮರಿಗಳನ್ನು ನಾಶಪಡಿಸುವ ಕ್ರಿಮಿನಾಶಕ ದ್ರಾವಣಗಳು ಮುಂತಾದ ಅತ್ಯಾವಶ್ಯಕ ವಸ್ತುಗಳು ಸಾಕಷ್ಟು ದಾಸ್ತಾನು ಜಿಲ್ಲೆಗೆ ಸರಬರಾಜು ಮಾಡಲಾಗಿದೆ.
3. ಮಂಗಳೂರು ನಗರದಲ್ಲಿ ಸೊಳ್ಳೆ ಉತ್ಪತ್ತಿತಾಣಗಳನ್ನು ಗುರ್ತಿಸಿ, ಅವುಗಳ ನಿಯಂತ್ರಣಕ್ಕಾಗಿ ಮಹಾನಗರ ಪಾಲಿಕೆಯ ಸಿಬ್ಬಂದಿಯು ಕ್ರಿಮಿನಾಶಕಗಳನ್ನು ಸಿಂಪಡಿಸುತ್ತಿದ್ದಾರೆ. ಇದಲ್ಲದೇ ನೀರು ಇಲ್ಲದಂತೆ ಹಾಗೂ ಸೊಳ್ಳೆ ಉತ್ಪತ್ತಿಯ ತಾಣಗಳನ್ನು ಮುಚ್ಚುವಂತೆ ಸಣ್ಣ ಕಾಮಗಾರಿ ಕೆಲಸಗಳನ್ನು ಕೈಗೊಳ್ಳಲು ನಗರವಾಸಿಗಳಿಗೆ ಸೂಚಿಸಲಾಗಿದೆ.
4. ಜನಜಾಗೃತಿ ಮೂಡಿಸಲು ಆರೋಗ್ಯ ಶಿಕ್ಷಣ ಚಟುವಟಿಕೆಗಳನ್ನು ಮುಂದುವರಿಸಲಾಗಿದೆ.
5. ನಗರದ ಜಿಲ್ಲಾ ಪ್ರಯೋಗಶಾಲೆ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಸೂಕ್ತ ಪ್ರಯೋಗಶಾಲಾ ವ್ಯವಸ್ಥೆಯನ್ನು ರಕ್ತಲೇಪನ ಪರೀಕ್ಷೆಗಾಗಿ ಮಾಡಲಾಗಿದೆ.
6. ಗ್ರಾಮಾಂತರ ಪ್ರದೇಶಗಳಲ್ಲಿ ಡಿ.ಡಿ.ಟಿ. ಕ್ರಿಮಿನಾಶಕದಿಂದ ಫೋಕಲ್ ಸಿಂಪಡೆಯನ್ನು ಕೈಗೊಳ್ಳಲಾಗಿದೆ.